ಕೋಟಿ ಹೆಚ್ಚುವರಿ ಹಣವನ್ನು ಪ್ರವಾಸೋದ್ಯಮ ಇಲಾಖೆಗೆ ಒದಗಿಸಲು ತೀರ್ಮಾನಿಸಿದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ

ಶ್ರೀ ಎಸ್. ಬಂಗಾರಪ್ಪ : ಇದು ಚರ್ಚೆ ಮಾಡತಕ್ಕ ವಿಷಯವಲ್ಲ, ಬರೀ ಹೇಳಿಕೆ ಕೊಡತಕ್ಕ ವಿಚಾರ.

ಶ್ರೀ ವಾಟಾಳ್ ನಾಗರಾಜ್ : ನಾವು ಇದರ ಮೇಲೆ ಮಾತನಾಡಬಾರದೇ?

ಅಧ್ಯಕ್ಷರು : ಸ್ಟೇಟ್ ಮೆಂಟ್ ಮೇಲೆ ಮಾತನಾಡುವ ಹಾಗೆ ಇಲ್ಲ, ನೀವು ಕೇಳುವುದು ಅಷ್ಟೇ. ನೀವು ಮಾತನಾಡುವ ಸಂದರ್ಭದಲ್ಲಿ ಮಾತನಾಡಬಹುದು. ಆಗ ನಾವು ಮೂಕಪ್ರೇಕ್ಷಕರಾಗುತ್ತೇವೆ. ರೂಲ್ಸ್ ನೋಡಿ. ನೀವೇ ರೂಲ್ಸ್ ಮಾಡಿದ್ದೀರಿ. ರೂಲ್ 59,60ನ್ನು ನೋಡಿ

ನಾಗರಾಜ್ : ಹಾಗಾದರೆ, ನಾವು ಮೂಕಪ್ರೇಕ್ಷಕರಾಗಿ ಕೇಳುವುದು ಅಷ್ಟೆ

(ಅಧ್ಯಕ್ಷರು, ಈ ಸಂದರ್ಭದಲ್ಲಿ ನಿಯಮಾವಳಿ ಪುಸ್ತಕವನ್ನು ಶ್ರೀ ವಾಟಾಳ್ ನಾಗರಾಜ್ ರವರಿಗೆ ಕಳುಹಿಸಿಕೊಟ್ಟರು)

ವಿಷಯ(ii): ಕನ್ನಡ ಕಾನೂನು ಶಬ್ದಕೋಶ ತಯಾರಿಕೆ

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೇ, ಮತ್ತೊಂದು ತಮ್ಮ ಅಪ್ಪಣೆ ಪಡೆದು ಹೇಳುತ್ತಿದ್ದೇನೆ. ನಾವು ಹಿಂದೆ ಇದೇ ಸದನದಲ್ಲಿ ಹೇಳಿದ್ದೆವು. ಕನ್ನಡ ಕಾನೂನು ಶಬ್ದಕೋಶವನ್ನು ತಯಾರು ಮಾಡುತ್ತೇವೆ. ಎನ್ನುವ ಉಲ್ಲೇಖ ನಮ್ಮ ಹಿಂದಿನ ಭಾಷಣದಲ್ಲಿ ಸಹ ಇದೆ. ಅದರ ಬಗ್ಗೆ ಈ ಒಂದು ಹೇಳಿಕೆಯನ್ನು ಕೊಡುತ್ತಿದ್ದೇನೆ.

ರಾಜ್ಯಸರ್ಕಾರವು ಕನ್ನಡ ಕಾನೂನು ಶಬ್ದಕೋಶವನ್ನು ತಯಾರಿಸಲು ಉದ್ದೇಶಿಸಿದೆ. ಈ ಸಂಬಂಧವಾಗಿ, ನ್ಯಾಯಾಧೀಶರು. ಕಾನೂನು ವೃತ್ತಿಯ ಮತ್ತು ಸಾಹಿತ್ಯರಂಗದ ಧುರೀಣರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಲು ಉದ್ದೇಶಿಸಿದೆ.

ಶ್ರೀ ವಾಟಾಳ್ ನಾಗರಾಜ್ : ಹಿಂದೆ, 1968ರಲ್ಲಿ ಮಾನ್ಯ ವೈಕುಂಠ ಬಾಳಿಗಾರವರು ಇದ್ದಾಗ ರೂಲ್ಸ್ ಪುಸ್ತಕ ಕಳುಹಿಸಿದ್ದರು.

ಅಧ್ಯಕ್ಷರು : 1968 ರಲ್ಲಿ ಕಳುಹಿಸಿದ್ದರೂ ಈಗ 1991 ಬಂದರೂ ಕೂಡ ಏನೂ ಪರಿಣಾಮವಾಗಲಿಲ್ಲವೆಂದು ನನಗೆ ಜೇಜಾರು ಅಷ್ಟೇ ಅದಕ್ಕಾಗಿ ಕಳುಹಿಸಿಕೊಟ್ಟಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ನಿಯಮಲಾವಳಿಗಳು ಇವೆ. ಅದನ್ನು ಒಪ್ಪುತ್ತೇನೆ. ಆದರೆ, ಒಂದು ಪ್ರಶ್ನೆ ನಾನು ನಿಯಮವನ್ನು ವಿರೋಧ ಮಾಡುತ್ತಾ ಇಲ್ಲ. ಅವರು ಹೇಳಿಕೆ ಕೊಡುವಾಗ, ಒಂದು ಬಾರಿ ದೊಡ್ಡ ಹೇಳಿಕೆಯನ್ನು ಕೊಡುತ್ತಿದ್ದಾರೆ. ಜಲಪಾತದ ಬಗ್ಗೆ. ನೀರು ಬಿಡುವ ಬಗ್ಗೆ ಅದರ ನಷ್ಟದ ಬಗ್ಗೆ, ಅದರ ಪರಿಸ್ಥಿತಿ ಬಗ್ಗೆ ಖಾಸಗಿ ವಲಯದ ಬಗ್ಗೆ, ಸಂಪೂರ್ಣವಾಗಿ, ಈ ಕಾನೂನು ಆಡಿಯಲ್ಲಿ ಏನು ಬೇಕಾದರೂ ಹೇಳಿಕೆಯನ್ನು ಕೊಡಬಹುದು. ಎಂದು ಹೇಳುವುದಾದರೆ. ನಮ್ಮ ಹಣೆಬರಹ ಏನು ಎಂದು ತಮ್ಮನ್ನು ಕೇಳುತ್ತಿದ್ದೇನೆ.

ಅಧ್ಯಕ್ಷರು : ಮಾನ್ಯ ವಿರೋಧಪಕ್ಷದ ನಾಯಕರೂ ಸೇರಿದಂತೆ ರೂಲ್ಸ್‌ಕಮಿಟಿಯನ್ನು ರಚನೆ ಮಾಡಿದೆ. ನಾನೂ ಕೂಡ ನಾಲ್ಕಾರು ಸಭೆ ಕರೆದೆ, ಆದರೆ, ಸಭೆಗೆ

ಕೋರಂ ಕೂಡ ಸಿಕ್ಕುತ್ತಾ ಇಲ್ಲ. ಆದ್ದರಿಂದ ರೂಲ್ಸ್ ಕಮಿಟಿಯಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡೋಣ...

ಶ್ರೀ ವಾಟಾಳ್ ನಾಗರಾಜ್ : ರೂಲ್ಸ್ ಪ್ರಕಾರ ಹೇಳಿಕೆ ಕೊಡುತ್ತಿದ್ದಾರೆಂದು ಹೇಳಿದಿರಿ, ನನಗೆ ರೂಲ್ಸ್ ಪುಸ್ತಕ ಕೂಡ ಕಳುಹಿಸಿದ್ದೀರಿ. ನಾನು ಈ ಪುಸ್ತಕ ನೋಡಿದಾಕ್ಷಣ ನನ್ನ ಮನಸ್ಸಿನಲ್ಲಿರತಕ್ಕಂಥ....

ಅಧ್ಯಕ್ಷರು : ಆ ಪುಸ್ತಕ ನೋಡಿ, ಗೇರುಸೋಪ್ಪೆ ಜಲಪಾತವನ್ನು ಮತ್ತು ಅದರ ಸೌಂದರ್ಯವನ್ನು ನೀವೇ ಕಲ್ಪಿಸಿಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ಅವರ ಹೇಳಿಕೆ ಮೇಲೆ ನಮ್ಮ ಕಣ್ಣೆದುರಿಗೆ ನೀರು ಧುಮುಕುತ್ತಿರುವುದು ಕಾಣುತ್ತಿದೆ.

ಶ್ರೀ ಎಸ್. ಬಂಗಾರಪ್ಪ : ತಾವು ಕಳುಹಿಸಿದ ಪುಸ್ತಕ ಅವರಿಗೆ ಆಘಾತವನ್ನುಂಟು ಮಾಡದಿರಲಿ ಎಂದೇ ನನ್ನ ಹೆಬ್ಬಯಕೆ.

ಶ್ರೀ ವಾಟಾಳ್ ನಾಗರಾಜ್ : ಈ ಪುಸ್ತಕದ ಆಘಾತದಿಂದ, ಅವರು ಮಾಡಬಾರದ ಕೆಲಸ ಮಾಡಬಾರದು ಮತ್ತು ಈ ಪುಸ್ತಕದ ಹೆಸರನ್ನಿಟ್ಟುಕೊಂಡು, ಈ ಪುಸ್ತಕ ಇದೆಯೆಂದು, ಅವರು ಏನು ಬೇಕಾದರೂ ಹೇಳುವುದಕ್ಕೆ ತಯಾರಿರಬಾರದೆಂದು ನಾನು ಹೇಳಿದೆ. ಅಷ್ಟೆ

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರು ತಮಗೆ ಏನು ರೂಲ್ಸ್ ಪುಸ್ತಕ ಕಳುಹಿಸಿದ್ದಾರೆ, ತಾವು ದಯಮಾಡಿ ಅದನ್ನು ಒಂದು ಸಾರಿ ಓದಿ ಮಡಿಚಿಟ್ಟು ಬಿಡಿ. ನನಗೆ ಅಷ್ಟೇ ಸಾಕು.

ಶ್ರೀ ವಾಟಾಳ್ ನಾಗರಾಜ್ : ಇವರೇ ಈ ರಾಜ್ಯದಲ್ಲಿ ಮತ್ತು ಈ ದೇಶದಲ್ಲಿ ಸರ್ವಜ್ಞರು, ನನ್ನ ಬಿಟ್ಟರೆ ಸರ್ವಜ್ಞರು ಬೇರೆಯಾರೂ ಇಲ್ಲವೆಂದು ವ್ಯಾಖ್ಯಾನ ಮಾಡುತ್ತಾರೆ. ಅದು ಅಲ್ಲ. ಇದು ನನಗನಿಸುತ್ತದೆ. ಇದು ಇಲ್ಲವೆಂದು ನಾನು ವಾದ ಮಾಡುತ್ತಾ ಇಲ್ಲ. ನಿಯಮಾವಳಿ ಪ್ರಕಾರ ತಾವು ಹೇಳುತ್ತಿದ್ದೀರಿ, ಅದರ ಬಗ್ಗೆ ನಾನು ವಾದ ಮಾಡುತ್ತಾ ಇಲ್ಲ ನನ್ನ ಚಿಂತೆ ಏನೆಂದರೆ ಈ ನಿಯಮಾವಳಿ ಪುಸ್ತಕ ಇಟ್ಟುಕೊಂಡು, ಈ ಸದನದಲ್ಲಿ ನಿಮಗೆ ಮಾತನಾಡದ ರೀತಿ ಅವಕಾಶ ಮಾಡಿಕೊಂಡು ತಮಗೆ ಇಚ್ಛೆಬಂದಾಗ ಹೇಳಿಕೆಯನ್ನು ಕೊಡುತ್ತಿದ್ದೀರಲ್ಲ ಎಂಬ ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇವತ್ತು ಕೊನೇ ದಿವಸ. ನಾಳೆ ಸದನ ಸೇರಿದ್ದರೆ, ಇದರ ಮೇಲೆ ಕ್ಲಾಸಿಫಿಕೇಷನ್ ಕೇಳಬಹುದು. ಅಥವಾ ಏನಾದರೂ ಕೇಳಬಹುದಿತ್ತು. ಕೊನೇ ದಿವಸದಲ್ಲಿ ಈ ರೀತಿ, ಸ್ಟೇಟ್‌ಮೆಂಟ್, ಮೇಲೆ, ಸ್ಟೇಟ್‌ಮೆಂಟ್ ಬರುತ್ತಿವೆ. ಇದರ ಬಗ್ಗೆ ನಮಗೆ ಚಿಂತೆಯಾಗಿರುವುದು.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ರಾಜ್ಯಸರ್ಕಾರವು ಕನ್ನಡ ಕಾನೂನು ಶಬ್ದಕೋಶವನ್ನು ತಯಾರಿಸಲು ಉದ್ದೇಶಿಸಿದೆ. ಈ ಸಂಬಂಧವಾಗಿ ನ್ಯಾಯಾಧೀಶರು. ಕಾನೂನು ವೃತ್ತಿಯ ಮತ್ತು ಸಾಹಿತ್ಯರಂಗದ ಧುರೀಣರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಲು ಉದ್ದೇಶಿಸಿದೆ.

ಈ ಸಮಿತಿಯಲ್ಲಿ ರಾಜ್ಯದ ಮುಖ್ಯಮಂತ್ರಿಯವರು ಹಾಗೂ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರು ಪೋಷಕರಾಗಿಯೂ ಹಾಗೂ ಕಾನೂನು ಸಚಿವರು ಉಪ ಪೋಷಕರಾಗಿಯೂ ಇರುತ್ತಾರೆ.

ಪ್ರಸ್ತುತ ಸಮಿತಿಯ ಅಧ್ಯಕ್ಷ ಸ್ಥಾನಕ್ಕೆ ಹೈಕೋರ್ಟಿನ ಹಾಲಿ ನ್ಯಾಯಾಧೀಶರೊಬ್ಬರನ್ನು ನೇಮಿಸಬೇಕೆಂಬ ಉದ್ದೇಶದಿಂದ ಈ ಬಗ್ಗೆ ರಾಜ್ಯ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರನ್ನು ಕೇಳಿಕೊಂಡಾಗ, ನ್ಯಾಯಮೂರ್ತಿ ಶ್ರೀ ಪಿ.ಕೆ. ಶ್ಯಾಮಸುಂದರ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಬಹುದೆಂದು ಮುಖ್ಯ ನ್ಯಾಯಾಧೀಶರು ಸೂಚಿಸಿರುತ್ತಾರೆ. ಆದುದರಿಂದ ಈ ಕೆಳಕಂಡ ವ್ಯಕ್ತಿಗಳನ್ನು ಒಳಗೊಂಡ ಸಮಿತಿಯನ್ನು ರಚಿಸಲು ತೀರ್ಮಾನಿಸಲಾಗಿದೆ.

1. ನ್ಯಾಯಮೂರ್ತಿ ಪಿ.ಕೆ. ಶ್ಯಾಮಸುಂದರ್ ಅಧ್ಯಕ್ಷರು
2. ಅಡ್ವೋಕೇಟ್ ಜನರಲ್ ಉಪಾಧ್ಯಕ್ಷರು
3. ಶ್ರೀ ಕೋ ಚನ್ನಬಸಪ್ಪ ಸದಸ್ಯರು
4. ಶ್ರೀ ಎಸ್. ಆರ್. ಕಂಠಿರಾವ್ ಸದಸ್ಯರು
5. ಶ್ರೀ ನಿಸ್ಸಾರ್ ಅಹಮದ್ ಸದಸ್ಯರು
6. ಶ್ರೀ ರೋಹ್ಡಿಕರ್ ಸದಸ್ಯರು
7. ಡಾ|| ಸಿದ್ದಲಿಂಗಯ್ಯ ಎಂ.ಎಲ್.ಸಿ. ಸದಸ್ಯರು
8. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸದಸ್ಯರು
9. ನಿರ್ದೇಶಕರು, ಪ್ರಸಾರಂಗ, ಮೈಸೂರು ಸದಸ್ಯರು
10. ನಿರ್ದೇಶಕರು, ಭಾಷಾಂತರ ಇಲಾಖೆ ಸದಸ್ಯರು.

ಈ ಸಮಿತಿಯು ಒಬ್ಬ ಪೂರ್ಣಾವಧಿ ಕಾರ್ಯದರ್ಶಿಯವರನ್ನು ಹೊಂದಿರುತ್ತದೆ. ಅವರು ಜಿಲ್ಲಾ ನ್ಯಾಯಾಧೀಶರ ಮಟ್ಟದವರಾಗಿರುತ್ತಾರೆ. ಅವರು ಸಮಿತಿಯ ಸಾಮಾನ್ಯ ಕೆಲಸಗಳನ್ನು ನೋಡಿಕೊಳ್ಳುವರು

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) : ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಬೆಳಿಗ್ಗೆ ನಿಯಮ 159ರ ಮೇರೆಗೆ ಚರ್ಚೆ ನಡೆಯುತ್ತಿದ್ದ ಸಂದರ್ಭದಲ್ಲಿ ಮಾನ್ಯ ವಿಶ್ವನಾಥ್‌ರವರು ಹೆಚ್. ಯು.ಡಿ ಸೆಕ್ರೆಟರಿ ಪಾಟ್ನಾಯಕ್ ಅವರು ಕೋಟ್ಯಾಂತರ ರೂಪಾಯಿಗಳನ್ನು ಮಾಡಿದ್ದಾರೆ ಎಂಬ ಆಪಾದನೆ ಮಾಡಿರುತ್ತಾರೆ. ಅವರ ಮೇಲೆ ಯಾವುದೇ ಎನ್‌ಕ್ವೈರಿ ಇಲ್ಲ. ಮಾನ್ಯ ಸದಸ್ಯರು ನೋಟೀಸ್ ಸಹ ಕೊಟ್ಟಿರಲಿಲ್ಲ. ಅದು ರೆಕಾರ್ಡಗೆ ಹೋಗಿದೆ. ಕೋಟ್ಯಾಂತರ ರೂಪಾಯಿ ಭ್ರಷ್ಟಾಚಾರ ಮಾಡಿದ್ದಾರೆ ಎಂಬುದನ್ನು ದಯವಿಟ್ಟು ರೆಕಾರ್ಡ್‌ನಿಂದ ತೆಗೆಸಿಹಾಕಬೇಕು.

ಶ್ರೀ ಎಚ್. ಏಕಾಂತಯ್ಯ : ನನಗೆ ಜ್ಞಾಪಕ ಇದ್ದಹಾಗೆ ಅವರು ಹೆಚ್.ಯು.ಡಿ ಸೆಕ್ರಟರಿ ಪಾಟ್ನಾಯಕ್ ಅವರ ಹೆಸರನ್ನು ಪ್ರಸ್ತಾಪ ಮಾಡಲಿಲ್ಲ. ಹಿಂದಿನ ಸೆಕ್ರೆಟರಿ ಬಗ್ಗೆ ಹೇಳಿದ್ದಾರೆ. ಅದರ ಬಗ್ಗೆ ದಯವಿಟ್ಟು ವೇರಿಫೈ ಮಾಡಿರಿ.

ಶ್ರೀ ಕೆ.ಜೆ. ಜಾರ್ಜ್ : ಅದು ರೆಕಾರ್ಡ್‌ನಲ್ಲಿ ಇದ್ದರೆ ದಯಮಾಡಿ ಅದನ್ನು ತೆಗೆಸಿಹಾಕಬೇಕೆಂದು ಕೋರುತ್ತೇನೆ.